ಮೂಲ ದಾವಾ ಸಂಖ್ಯೆ. 21/2022 ಪಿ ಡಬ್ಲ್ಯೂ 3

(ದಿನಾಂಕ 05-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಸಿ ಬಿ ಪಿ ವಕೀಲರಿಂದಃ-

1ನೇ ವಾದಿಯು ಮೂಲತಃ ಚಿಲುಗೋಡು ಗ್ರಾಮದವಳು ಅವಳನ್ನು ನಮ್ಮ ಊರಿಗೆ ವಿವಾಹ ಮಾಡಿಕೊಂಡು ಬಂದಿರುತ್ತೇವೆ. 1ನೇ ವಾದಿಯ ಗಂಡನ ಹೆಸರು ನನಗೆ ನೆನಪಿಲ್ಲ. 1ನೇ ವಾದಿಯ ಗಂಡ ಮತ್ತು ಅವನ ಸಹೋದರರು ಈ ಹಿಂದೆ ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸುಳ್ಳು. ನಮ್ಮ ಗ್ರಾಮದ ಚೌಟಗಿ ರೇಣುಕಮ್ಮ ನನಗೆ ಗೊತ್ತಿಲ್ಲ. 1ನೇ ವಾದಿಯು ಸದರಿ ರೇಣುಕಮ್ಮ ಇವರಿಗೆ ಒಂದು ನಿವೇಶನವನ್ನು ಮಾರಾಟ ಮಾಡಿದ್ದಾರೆಂದರೆ ಸುಳ್ಳು. ರೇಣುಕಮ್ಮ ಇವರು ಸದರಿ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಬ್ಯಾಸ್ಗಿದೇರಿ ಗ್ರಾಮದಲ್ಲಿ 3 ಜಮೀನುಗಳನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನಿನ ಸರ್ವೆ ನಂಬರ್ 62 ಇರುತ್ತದೆ. ಸದರಿ ಜಮೀನು ಮೊದಲು ಯಾರದ್ದು ಈಗ ಯಾರ ಹೆಸರಿನಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ. 1ನೇ ವಾದಿಯು ತಾನು ಪ್ರತಿವಾದಿಯರ ಬಳಿ ಭಾಗ ಕೇಳಿದ್ದೆ ಅವರು ನನಗೆ ಭಾಗ ಕೊಡಲಿಲ್ಲ ಅಂತಾ ಹೇಳಿರುತ್ತಾಳೆ. ಈ ವಿಚಾರವನ್ನು 1ನೇ ವಾದಿಯು ನನಗೆ 4 ವರ್ಷದ ಹಿಂದೆ ಹೇಳಿರುತ್ತಾಳೆ. ನಾನು ಪ್ರತಿವಾದಿಯರಿಗೆ ಸದರಿ ವಿಚಾರವನ್ನು ಕೇಳಿಲ್ಲ. ನನಗೆ ಈ ದಾವೆ ಮತ್ತು ದಾವಾಸ್ತಿ ಮತ್ತು ದಾವಾ ಪಕ್ಷಗಾರರ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹಾ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರು ಈಗಾಗಲೇ ವಿಭಾಗದಲ್ಲಿ ತನ್ನ ಹಿಸ್ಸೆಯನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. ವಾದಿಯರು ಹೆಚ್ಚಿನ ಆಸೆಗಾಗಿ ಈ ಸುಳ್ಳು ದಾವೆಯನ್ನು ದಾಖಲಿಸಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ